ಕರ್ನಾಟಕ ಸರ್ಕಾರ

ಸಂಖ್ಯೆ: ಲಿಪಿಕ (03)/32/2018-19

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ, ಆನಂದರಾವ್ ವೃತ್ತ, ಬೆಂಗಳೂರು, ದಿನಾಂಕ:14/08/2018

## ಅಧಿಕೃತ ಜ್ಞಾಪನಾ ಪತ್ರ

**ವಿಷಯ:** 2018-19ನೇ ಸಾಲಿನ ಕಛೇರಿ ಅಧೀಕ್ಷಕರು ಹುದ್ದೆಗಳಿಗೆ ಕೌನ್ಸಿಲಿಂಗ್ ಮೂಲಕ ವರ್ಗಾವಣೆ ಮಾಡಿ ಸ್ಥಳ ನಿಯುಕ್ತಿಗೊಳಿಸುವ ಬಗ್ಗೆ.

**ಉಲ್ಲೇಖ:** 1) ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ವೈದ್ಯಾಧಿಕಾರಿಗಳು ಮತ್ತು ಇತರೆ ಸಿಬ್ಬಂದಿ ವರ್ಗಾವಣೆ ನಿಯಂತ್ರಣ) ಕಾಯ್ದೆ 2011 ಮತ್ತು ತಿದ್ದುಪಡಿ ನಿಯಮ 2013ರಡಿ ರಚಿತವಾಗಿರುವ ನಿಯಮಗಳು.

2) ಈ ನಿರ್ದೇಶನಾಲಯದ ಸುತ್ತೋಲೆ ಪತ್ರ ಸಂಖ್ಯೆ ಆಡಳಿತ/90/2018-19 ದಿನಾಂಕ 06.06.2018 ಮತ್ತು 12.06.2018

3) ಈ ನಿರ್ದೇಶನಾಲಯದ ಸಮಸಂಖ್ಯೆಯ ಸುತ್ತೋಲೆ ಪತ್ರ ದಿನಾಂಕ 11.07.2018 & 10.08.2018

4) ಸರ್ಕಾರದ ಆದೇಶ ಸಂಖ್ಯೆ:ಆಕುಕ/50/ಹೆಚ್ಎಸ್ಹೆಚ್/2018, ದಿನಾಂಕ: 21.07.2018

**-*-*-**

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿರುವ ಕಛೇರಿ ಅಧೀಕ್ಷಕರು, ಉಲ್ಲೇಖ(1) ರ ಕಾಯ್ದೆ ಮತ್ತು ನಿಯಮಗಳು 9, 10, 13 ಮತ್ತು 14 ರ ಪ್ರಕಾರ ಮತ್ತು ಉಲ್ಲೇಖ(2) ರಿಂದ (4) ರ ಆದೇಶದಂತೆ ಕೋರಿಕೆ ವರ್ಗಾವಣೆಗೆ ಅವಕಾಶ ಕಲ್ಪಿಸಲಾಗಿದೆ. ಅದರಂತೆ ದಿನಾಂಕ: 14/08/2018 ರಂದು ನಡೆದ ವರ್ಗಾವಣಾ ಕೌನ್ಸಿಲಿಂಗ್‌ಗೆ ಹಾಜರಾಗಿ ಸ್ಥಳ ಆಯ್ಕೆ ಮಾಡಿಕೊಂಡಿರುವ, ಕಛೇರಿ ಅಧೀಕ್ಷಕರಿಗೆ ಅವರ ಹೆಸರಿನ ಮುಂದೆ ನಮೂದಿಸಿರುವ ಸ್ಥಳಕ್ಕೆ ವರ್ಗಾವಣೆ ಮಾಡಿ ನೇಮಿಸಿದೆ. ಸದರಿಯು ನೌಕರರ ಕೋರಿಕೆ ವರ್ಗಾವಣೆ ಆಗಿರುವುದರಿಂದ ಯಾವುದೇ ಭತ್ಯೆ ಹಾಗೂ ಸೇರುವ ಕಾಲಕ್ಕೆ ಅರ್ಹರಿರುವುದಿಲ್ಲ.

| ಕ್ರ. ಸಂ | ನೌಕರರ ಹೆಸರು ಮತ್ತು ಕರ್ತವ್ಯ ನಿರ್ವಹಿಸುತ್ತಿರುವ ಸ್ಥಳ | ವರ್ಗಾವಣೆ ಕೌನ್ಸಿಲಿಂಗ್‌ನಲ್ಲಿ ಆಯ್ಕೆ ಮಾಡಿಕೊಂಡಿರುವ ಸ್ಥಳ | ವರ್ಗಾವಣೆಯನ್ನು ಪಡೆದಿರುವ ಪ್ರಕರಣ |
|---|---|---|---|
| 3 | ರೇಣುಕಾಮ್ಮ ಪಿ.ಆಸಂಗಿ, ಸಾರ್ವಜನಿಕ ಆಸ್ಪತ್ರೆ, ಶಿಕಾರಿಪುರ, ಶಿಕಾರಿಪುರ ತಾಲ್ಲೂಕು ಶಿವಮೊಗ್ಗ ಜಿಲ್ಲೆ | ಸಾರ್ವಜನಿಕ ಆಸ್ಪತ್ರೆ, ಸಾಗರ, ಸಾಗರ ತಾ॥, ಶಿವಮೊಗ್ಗ ಜಿಲ್ಲೆ. | ವಿಧವೆ |
| 5 | ರಾಜಲಕ್ಷ್ಮೀ ಎಂ. ಮಣಕೀಕರ ತಾಲೂಕಾ ಆಸ್ಪತ್ರೆ, ಹೊನ್ನಾವರ ಉತ್ತರ ಕನ್ನಡ ಜಿಲ್ಲೆ | ಸಮುದಾಯ ಆರೋಗ್ಯ ಕೇಂದ್ರ ಸೋಲೂರು, ಮಾಗಡಿ ತಾ॥, ರಾಮನಗರ ಜಿಲ್ಲೆ. | ವಿಧವೆ |

| | | | |
|---|---|---|---|
| **8** | ಹಿಸ್ಸಾಮುದ್ದೀನ್<br>ಸ.ಆ.ಕೇಂದ್ರ ನೆಲೋಗಿ ತಾ॥ ಜೇವರ್ಗಿ<br>ಕಲಬುರಾಗಿ ಜಿಲ್ಲೆ. | ಸಮುದಾಯ ಆರೋಗ್ಯ ಕೇಂದ್ರ<br>ಕಾಳಗಿ, ಚಿತ್ತಾಪೂರ ತಾ॥,<br>ಕಲಬುರಗಿ ಜಿಲ್ಲೆ. | ಪತಿ-ಪತ್ನಿ |
| **11** | ರೋಹಿಣಿ ಕೆ.ಎಂ,<br>ಸಾ.ಆಸ್ಪತ್ರೆ ವಿರಾಜಪೇಟೆ, ಕೊಡಗು ಜಿಲ್ಲೆ | ಜಿಲ್ಲಾ ಆರೋಗ್ಯ ಮತ್ತು<br>ಕುಟುಂಬ ಕಲ್ಯಾಣಾಧಿಕಾರಿಗಳ<br>ಕಚೇರಿ ಮಡಿಕೇರಿ. | ಪತಿ-ಪತ್ನಿ |
| **17** | ಆರ್. ಗಣೇಶ್, ಸಾ.ಆ.ಗೌರಿಬಿದನೂರು<br>ಚಿಕ್ಕಬಳ್ಳಾಪುರ ಜಿಲ್ಲೆ. | ಜಿಲ್ಲಾ ಕುಷ್ಠರೋಗ<br>ನಿರ್ಮೂಲನಾಧಿಕಾರಿಗಳ ಕಛೇರಿ<br>ಚಿಕ್ಕಬಳ್ಳಾಪುರ ಜಿಲ್ಲೆ. | ಸಾಮಾನ್ಯ |

ಸದರಿ ನೌಕರರು ನೇಮಿಸಿರುವ ಸ್ಥಳದಲ್ಲಿ ಕರ್ತವ್ಯಕ್ಕೆ ಕೂಡಲೇ ಹಾಜರಾಗಿ ಸಂಬಂಧಪಟ್ಟವರೆಲ್ಲರಿಗೂ ಹಾಜರಾತಿ ವರದಿಯನ್ನು ಕಡ್ಡಾಯವಾಗಿ ಸಲ್ಲಿಸುವುದು.

ಮುಖ್ಯ ಆಡಳಿತಾಧಿಕಾರಿಗಳು,
ಆರೋಗ್ಯ ಮತ್ತು ಕು.ಕ.ಸೇವೆಗಳು.

<u>ಪ್ರತಿಯನ್ನು ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ</u>

1). ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು

2) ಜಿಲ್ಲಾ ಆರೋಗ್ಯ ಮತ್ತು ಕು.ಕ.ಅಧಿಕಾರಿಗಳು/ಜಿಲ್ಲಾ ಶಸ್ತ್ರಚಿಕಿತ್ಸಕರು, ಜಿಲ್ಲಾ ಆಸ್ಪತ್ರೆ------------------- ಜಿಲ್ಲೆ ರವರಿಗೆ ಕಳುಹಿಸುತ್ತಾ, ಸದರಿ ನೌಕರರು ನೇಮಿಸಿದ ಸ್ಥಳದಲ್ಲಿ ಕರ್ತವ್ಯಕ್ಕೆ ಹಾಜರಾದ ಬಗ್ಗೆ ವರದಿಯನ್ನು ಸಲ್ಲಿಸುವುದು.

3) ವೈದ್ಯಕೀಯ ಅಧೀಕ್ಷಕರು ------------------ ಆಸ್ಪತ್ರೆ, --------------ಜಿಲ್ಲೆ

4) ಆಡಳಿತ ವೈದ್ಯಾಧಿಕಾರಿಗಳು ಸಾರ್ವಜನಿಕ ಆಸ್ಪತ್ರೆ/ಸಮುದಾಯ ಆರೋಗ್ಯ ಕೇಂದ್ರ,/ಪ್ರಾಥಮಿಕ ಆರೋಗ್ಯ ಕೇಂದ್ರ.......................................................ತಾಲ್ಲೂಕು..............................ಜಿಲ್ಲೆ

5) ನಿದೇಶನಾಲಯದ ಗಣಕಯಂತ್ರ ವಿಭಾಗಕ್ಕೆ ಕಳುಹಿಸುತ್ತಾ ಸದರಿ ಅಧಿಕೃತ ಜ್ಞಾಪನಾ ಪತ್ರವನ್ನು ಇಲಾಖೆಯ ವೆಬ್-ಸೈಟ್ ನಲ್ಲಿ ಇಂದೇ ಪ್ರಕಟಿಸಲು ಕ್ರಮವಹಿಸುವುದು.

6) ಸಂಬಂಧಿಸಿದ ನೌಕರರಿಗೆ

7) ಕಛೇರಿ ಪ್ರತಿ